# ಕುಲವೆರೆಡು ಮನವೊಂದು

ಬಹುಭಾಷಿಕರು ಹಾಗೂ ಬಹುಧರ್ಮೀಯರಿಂದ ನಿರ್ಮಿತವಾದದ್ದು ಕನ್ನಡ ಜಾನಪದ ಪರಂಪರೆ. ಈ ಹಿನ್ನೆಲೆಯಲ್ಲಿ ಜಾನಪದ ಸಂಸ್ಕೃತಿ ಎನ್ನುವುದು ವಿಸ್ತೃತ ರೂಪದಲ್ಲಿ ಬಹುತ್ವದ ಮತ್ತು ಸಾಮರಸ್ಯದ ಅಭಿವ್ಯಕ್ತಿ. ಗ್ರಾಮೀಣ ಜೀವನ ಮತ್ತು ಸಮಾಜದ ಹೆಣಿಗೆಯಿಂದ ವಿನ್ಯಾಸಗೊಂಡು ಪ್ರಕೃತಿಯ ರೂಪಕಗಳ ಮೂಲಕ ಲೋಕದರ್ಶನವನ್ನು ನೀಡುವ ಉತ್ಕೃಷ್ಟ ಅಭಿವ್ಯಕ್ತಿಗಳು ಜಾನಪದ ಸಂಸ್ಕೃತಿಯಲ್ಲಿ ಅಂತರ್ಗತವಾಗಿವೆ. ಜನಪದ ಪ್ರದರ್ಶನ ಕಲೆ, ಸಾಹಿತ್ಯ, ಹಬ್ಬ–ಹರಿದಿನಗಳು, ಬೇಸಾಯ, ಕೆರೆಕೋಡಿ ಪೂಜೆ, ಜಾತ್ರೆ, ವಿವಿಧ ಸಾಮಾಜಿಕ ಮತ್ತು ಧಾರ್ಮಿಕ ಆಚರಣೆ, ಗ್ರಾಮೀಣ ಕ್ರೀಡೆ ಹಾಗೂ ರಂಗಭೂಮಿ ಇವೆಲ್ಲವೂ ಸಮುದಾಯದ ಸಹಭಾಗಿತ್ವದಿಂದ ರೂಪುತಳೆಯುತ್ತವೆ. ವ್ಯಕ್ತಿ ನೆಲೆಗಿಂತ ಸಮೂಹ ನೆಲೆಯಲ್ಲಿಯೇ ಇವು ಹೆಚ್ಚು ಪ್ರಕಟಗೊಳ್ಳುತ್ತವೆ. ಮೂಲತಃ ಸಮಷ್ಟಿಯ ಹಿತವನ್ನು ಬಯಸುವುದು ಜನಪದ ಸಂಸ್ಕೃತಿಯ ಗುಣ. ಸಮುದಾಯದ ಹಿತವನ್ನು ಕಡೆಗಣಿಸಿ; ವ್ಯಕ್ತಿ ಮತ್ತು ಕುಟುಂಬ ಕೇಂದ್ರಿತ ನೆಲೆಯತ್ತ ಚಲಿಸುತ್ತಿರುವ ಆಧುನಿಕ ಸಮಾಜಕ್ಕೆ ಬದುಕಿನ ನೈತಿಕ ಮೌಲ್ಯಗಳು ಹಾಗೂ ಕೂಡಿಬಾಳುವ ಸಾಮರಸ್ಯದ ಪಾಠವನ್ನು ಜನಪದ ಸಂಸ್ಕೃತಿ ಹೇಳುತ್ತದೆ. ಈ ಹಿನ್ನೆಲೆಯಲ್ಲಿ ಜಾನಪದ ಸಂಸ್ಕೃತಿಯ ಅಧ್ಯಯನ ಎಂದರೆ, ಸಮಾಜದ ಸಾಮರಸ್ಯದ ಅಧ್ಯಯನ.

ಜಾತಿ ಮತ್ತು ಮತಧರ್ಮಗಳನ್ನು ಮೀರಿ ಸಮಾಜದ ಎಲ್ಲ ಸಮುದಾಯದವರನ್ನು ಜನಪದ ಸಂಸ್ಕೃತಿ ತನ್ನೊಳಗೆ ಒಳಗೊಳ್ಳುತ್ತದೆ. ಗ್ರಾಮೀಣ ಬದುಕಿನಲ್ಲಿ ನಾವು ಕಾಣುವ ಕೋಲಾಟ, ರಂಗಭೂಮಿ ಹಾಗೂ ಜನಪದ ಕ್ರೀಡೆಗಳು ಈ ಒಳಗೊಳ್ಳುವಿಕೆಗೆ ದೊಡ್ಡ ಉದಾಹರಣೆಗಳಂತಿವೆ. ಹಳ್ಳಿಗಳಲ್ಲಿ ನಡೆಯುವ ಸಾವು ಮತ್ತು ಮದುವೆಯಂಥ ಆಚರಣೆಗಳೂ ಸಹ ಈ ಒಳಗೊಳ್ಳುವಿಕೆಯ ಕ್ರಿಯಾರೂಪಗಳೇ ಆಗಿವೆ. ಜಾತಿ, ಬಡವ–ಶ್ರೀಮಂತ ಎಂಬ ಭಾವನೆಯನ್ನು ಬದಿಗೊತ್ತಿ ಸಾವು, ಮದುವೆ ಮತ್ತು ಜಾತ್ರೆಗಳ ಸಂದರ್ಭಗಳಲ್ಲಿ ಸಮಾಜದ ಎಲ್ಲ ಸಮುದಾಯಗಳೂ ಪಾಲ್ಗೊಳ್ಳುವುದು ಹಳ್ಳಿಗಳಲ್ಲಿ ಈಗಲೂ ನಡೆದುಕೊಂಡು ಬಂದಿದೆ.

ನಮ್ಮ ಕೆಲವು ಗ್ರಾಮೀಣ ಭಾಗಗಳಲ್ಲಿ ಈಗಲೂ ‘ಹೊರಬೀಡು’ ಎನ್ನುವ ಆಚರಣೆಯನ್ನು ಸಾಮೂಹಿಕವಾಗಿ ಆಚರಿಸಲಾಗುತ್ತಿದೆ. ಊರಿಗೆ ಒಳಿತಾಗಲಿ, ಯಾವ ರೋಗ–ರುಜಿನಗಳೂ ಹಳ್ಳಿಯ ಜನರನ್ನು ಮತ್ತು ದನಕರುಗಳನ್ನು ಕಾಡದಿರಲಿ ಎನ್ನುವ ಸಾಮೂಹಿಕ ಹಿತದ ಆಚರಣೆ ಇದು. ‘ಹೊರಬೀಡು’ ನಿಗದಿಯಾದ ದಿನದಂದು ಹಳ್ಳಿಯ ಎಲ್ಲ ಸಮುದಾಯದವರೂ ತಮ್ಮ ತಮ್ಮ ಮನೆಗಳಿಗೆ ಬೀಗ ಹಾಕಿ, ಮನೆಯ ಮುಂದೆ ಮುಳ್ಳು ಎಳೆದು, ಊರ ಹೊರಗಿನ ದೊಡ್ಡ ಬಯಲಿಗೆ ಬರುತ್ತಾರೆ. ಬಯಲಿನಲ್ಲಿ ಒಲೆ ಹೂಡಿ ಅಡುಗೆ ಮಾಡಿಕೊಳ್ಳುತ್ತಾರೆ. ಹೀಗೆ ಅಡುಗೆ ಮಾಡಿಕೊಳ್ಳುವಾಗ ಯಾವುದೇ ಜಾತಿಯ ಕಟ್ಟುಪಾಡುಗಳನ್ನಾಗಲಿ ಇವರು ಆಚರಿಸುವುದಿಲ್ಲ. ತಮ್ಮ ತಮ್ಮ ಕುಟುಂಬದವರ ಜೊತೆ, ನೆರೆಹೊರೆಯವರ ಜೊತೆ ಕುಳಿತು ಸಾಮೂಹಿಕವಾಗಿ ಊಟ ಮುಗಿಸಿ ಸಂಜೆ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಮರಳಿ ಬರುತ್ತಾರೆ. ಹೀಗೆ ಬರುವಾಗ ತಮ್ಮ ಮನೆಯ ಹಳೆಯ ವಸ್ತುಗಳನ್ನೆಲ್ಲಾ ಬೆಂಕಿಗೆ ಎಸೆದು ‘ಕೆಟ್ಟದ್ದು ಕಳೆಯಿತು’ ಎಂದು ಮನೆಗೆ ಬರುತ್ತಾರೆ. ಮಾನವ ಸಮಾಜದ ಆದಿಮ ಬದುಕಿನ ಪುನರಭಿನಯವೇ ‘ಹೊರಬೀಡು’. ಹೇಗೆ ನೋಡಿದರೂ ಇದೊಂದು ಕೂಡಿ ಬಾಳುವ ಆಶಯದ, ಎಲ್ಲರಿಗೂ ಒಳಿತಾಗಲಿ ಎನ್ನುವ ಪರಿಶುದ್ಧ ಸಾಮೂಹಿಕ ಮನಸ್ಸಿನ ಆಚರಣೆ.

ಮುಸ್ಲಿಂರೇ ಇಲ್ಲದ ಹಳ್ಳಿಗಳಲ್ಲೂ ನಮ್ಮ ಜನ ‘ಮೊಹರಂ’ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುವುದನ್ನು ನಾವು ಕರ್ನಾಟಕದಾದ್ಯಂತ ನೋಡುತ್ತೇವೆ. ಬಹುಸಂಖ್ಯಾತ ಹಿಂದೂಗಳು ತಮ್ಮ ರೋಗ–ರುಜಿನಗಳ ನಿವಾರಣೆಗಾಗಿ ಬಾಬಯ್ಯನಿಗೆ ಹರಕೆ ಕಟ್ಟಿಕೊಳ್ಳುವುದು, ‘ಸಕ್ಕರೆ ಓದಿಸು’ವುದು ಇಂದಿಗೂ ಅನೂಚಾನವಾಗಿ ನಡೆದುಕೊಂಡು ಬರುತ್ತಿದೆ. ಹಾಗೆಯೇ ನಮ್ಮ ಗ್ರಾಮ ದೇವತೆಗಳಿಗೆ ಹರಕೆ ಕಟ್ಟಿಕೊಂಡು ಪೂಜಿಸುವ ಮುಸ್ಲಿಂ ಸಮುದಾಯಗಳೂ ನಮ್ಮ ನಡುವೆ ಸಾಕಷ್ಟಿವೆ. ನಾಡಿನ ಕೆಲವು ಸಿದ್ಧ–ಸಂತರ ಗದ್ದಿಗೆಗಳನ್ನು ಮತ್ತು ದರ್ಗಾಗಳನ್ನು ಹಿಂದೂ–ಮುಸ್ಲಿಂರು ಕೂಡಿ ಆರಾಧಿಸುವ ಕೇಂದ್ರಗಳು ಹೇರಳವಾಗಿವೆ. ಗಡಿ ಭಾಗದಲ್ಲಿರುವ ಹಳ್ಳಿಯೊಂದರಲ್ಲಿ ದರ್ಗಾವೊಂದರಲ್ಲಿ ಕಾಡುಗೊಲ್ಲರು ಪೂಜಾರಿಗಳಾಗಿ, ತಮ್ಮ ಸಂಪ್ರದಾಯದಂತೆ ಪೂಜೆ ಸಲ್ಲಿಸುತ್ತಿರುವುದು ಈಗಲೂ ನಮ್ಮ ನಡುವೆ ಇದೆ. ಈ ಆಚರಣೆಗಳ ಆಳದಲ್ಲಿ ಮತ–ಧರ್ಮಗಳ ಸಂಕುಚಿತ ಬೇಲಿಯನ್ನು ದಾಟಿ ನಮ್ಮ ಹಳ್ಳಿಗಾಡಿನ ಜನ ಧಾರ್ಮಿಕ ಸೌಹಾರ್ದತೆಯಿಂದ ಬಾಳುವೆ ಮಾಡುತ್ತಿದ್ದರು ಎನ್ನುವುದನ್ನು ಸಂಕೇತಿಸುತ್ತಿದೆ.

ಹಬ್ಬಗಳು ಕೇವಲ ನಮ್ಮ ಸಂಪತ್ತಿನ ಕೆಟ್ಟ ಪ್ರದರ್ಶನಕ್ಕೆ ಮತ್ತು ಕುಟುಂಬಕ್ಕಷ್ಟೆ ಸೀಮಿತವಾಗುತ್ತಿರುವ ಇಂದಿನ ದಿನಗಳಲ್ಲಿ, ಹಬ್ಬ–ಹುಣ್ಣಿಮೆ ಎನ್ನುವುದು ನೆರೆಹೊರೆಯವರೊಂದಿಗೆ ಸೌಹಾರ್ದತೆಯಿಂದ ಕಲೆತು ಬಾಳುವೆ ಮಾಡುವುದು ಎನ್ನುವುದನ್ನು ಇಂದಿನ ಸಮಾಜ ಮರೆಯಬಾರದು. ಮಲೆನಾಡಿನ ಭಾಗದಲ್ಲಿ ದೀವಳಿಗೆಯ ಹಬ್ಬದ ಸಂದರ್ಭದಲ್ಲಿ ಬಲಿಪಾಡ್ಯಮಿಯ ದಿನದಂದು ರೈತರು ಊರದೇವರ ದೇಗುಲದ ದೀಪದಿಂದ ತಮ್ಮ ತಮ್ಮ ದೀಪಗಳನ್ನು ಹಚ್ಚಿಕೊಳ್ಳುತ್ತಾರೆ. ದೀಪ ಹಿಡಿದ ಮುಖ್ಯಸ್ಥನ ಹಿಂದೆ ಹಾಡುಗಾರರು ಹಾಡುತ್ತಾ ಎಲ್ಲ ದಿಕ್ಕುಗಳಿಗೂ ಗುಂಪುಗಳಾಗಿ ಮನೆ ಮನೆಗೂ ತೆರಳಿ ದೀಪ ನೀಡಲು ಹೋಗುತ್ತಾರೆ: ಹೀಗೆ ದೀಪ ಕೊಟ್ಟುಬರುವ ಸಂಪ್ರದಾಯವೊಂದು ಈಗಲೂ ಆಚರಣೆಯಲ್ಲಿದೆ. ಗುಂಪಿನಲ್ಲಿ ಹೋಗಿ ಮನೆ ಮನೆಗೆ ದೀಪ ಕೊಡುವ ರೂಪಕವೇ ಹೆಚ್ಚು ಮಾನವೀಯವಾದದ್ದು.

ಹೇಳಿಕೇಳಿ ನಮ್ಮದು ಜಾತಿಪದ್ಧತಿಯ ಸಮಾಜ. ಅಸ್ಪೃಶ್ಯರು, ದುರ್ಬಲ ಮತ್ತು ಅಸಹಾಯಕ ಸಮುದಾಯಗಳು ನಿತ್ಯವೂ ನಿಂದನೆ ಹಾಗೂ ಅಪಮಾನಗಳನ್ನು ಸಹಿಸಿಕೊಂಡೇ ಬದುಕುತ್ತಿರುತ್ತವೆ. ಇಂತಹ ಸಂದರ್ಭದಲ್ಲಿ ಜಾತಿ ಪ್ರಶ್ನೆಯಿಂದ ನೊಂದ ಹೆಣ್ಣೊಂದು ಹೇಳುವ ಈ ಮಾತುಗಳು ಮನಸ್ಸನ್ನು ಕಲಕುತ್ತದೆ:

ನಾನು ನನ್ನ ಗೆಳತಿ ಕೂಡಿ ನೀರಿಗಿ ಹೋಗಿ
ಕುಲವ ಕೇಳ್ಯಾರ ಬಹುಮಂದಿ/ ಕೇಳಿದರ
ಕುಲವೆರಡು ನಮ್ಮ ಮನವೊಂದು

ಸಾಮರಸ್ಯದ ಜೀವನ ನಮ್ಮ ಪ್ರಾಚೀನ ಬದುಕಿನ ಸಹಜ ಸಂಗತಿಯೇ ಆಗಿತ್ತು, ಬದುಕಿನ ಉನ್ನತ ಮೌಲ್ಯಗಳು ಇರುವ ಈ ಬಗೆಯ ಆಚರಣೆಗಳಿಂದ ನಾವು ಪಾಠ ಕಲಿಯಬೇಕು ಎನ್ನುವುದನ್ನು ಜನಪದ ಸಂಸ್ಕೃತಿ ನಮಗೆ ತೋರಿಸುತ್ತದೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ತನ್ನ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿರುವವನಿಗೆ ಜಗತ್ತು ಎಂದೂ ಬೇಸರದ್ದಾಗಿ ಕಾಣುವುದಿಲ್ಲ.
  —ಮಹಾತ್ಮ ಗಾಂಧಿ
- ವ್ಯಕ್ತಿತ್ವ ಸಾಧನೆ ಹೊಸ ಯುಗದ ಬೀಜಮಂತ್ರ.
  —ರಂ.ಶ್ರೀ. ಮುಗಳಿ
- ಆಸೆಗೆ ಆಳಾಗುವವನು ಲೋಕಕ್ಕೆ ಆಳಾಗುತ್ತಾನೆ. ಆಸೆಯನ್ನೇ ಆಳುವವನಿಗೆ ಲೋಕವೇ ಆಳಾಗುತ್ತದೆ.
  —ಸುಭಾಷಿತ
- ಜಗತ್ತು ಯಾವತ್ತೂ ಪೂಜಿಸುವುದು ಪ್ರತಿಭಾವಂತ ಶಕ್ತಿಶಾಲಿಗಳನ್ನೇ ಹೊರತು ದುರ್ಬಲರನ್ನಲ್ಲ.
  —ಸ್ವಾಮಿವಿವೇಕಾನಂದ
- ಮನುಷ್ಯ ಕೋಪವನ್ನು ಪ್ರೀತಿಯಿಂದ, ಪಾಪವನ್ನು ಸದಾಚಾರದಿಂದ, ಸುಳ್ಳನ್ನು ಸತ್ಯದಿಂದ ಗೆಲ್ಲಬಲ್ಲ.
  —ಗೌತಮ ಬುದ್ಧ
- ಧೈರ್ಯ ಎನ್ನುವುದು ನಮ್ಮೊಳಗಿದ್ದರೆ ಅದುವೇ ನಮ್ಮೆಲ್ಲರ ವ್ಯಕ್ತಿತ್ವದ ದೊಡ್ಡ ಆಸ್ತಿಯಾಗುತ್ತದೆ.
  —ಬಾಲಗಂಗಾಧರ ತಿಲಕ್